ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು,
ದಿನಾಂಕ: 06.03.2024.

ಸಂಖ್ಯೆ: ಕಾಶಿಇ:ಶೈವಿ:218:ಸ್ಕೌಟ್ಸ್ & ಗೈಡ್ಸ್/2020-21
(ಭಾಗ-2)

## ಅಧಿಕೃತ ಜ್ಞಾಪನ

ವಿಷಯ: ರೋವರ್ಸ್ / ರೇಂಜರ್ಸ್‌ಗಳಿಗೆ ರಾಜ್ಯ ಮಟ್ಟದ ಜಲಸಾಹಸ, ಪ್ರಕೃತಿ ಅಧ್ಯಯನ ಮತ್ತು ವಿಪತ್ತು ನಿರ್ವಹಣಾ ಶಿಬಿರಗಳನ್ನು ಆಯೋಜಿಸಿರುವ ಬಗ್ಗೆ.

ಉಲ್ಲೇಖ: ರಾಜ್ಯ ಕಾರ್ಯದರ್ಶಿಗಳು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರವರ ಪತ್ರ ಸಂಖ್ಯೆ:ಎಸ್‌ಹೆಚ್‌ಕ್ಯೂ/2783/2023-24 dt:01.03.2024.

********

ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಡ್ಡಾಯವಾಗಿ ಭಾರತ್ ಸ್ಕೌಟ್ಸ್ & ಗೈಡ್ಸ್ ಘಟಕಗಳನ್ನು ಸ್ಥಾಪಿಸಿ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಈ ಘಟಕಗಳನ್ನು ನಿರ್ವಹಿಸಲು ತರಬೇತಿ ಪಡೆದ ಅಧ್ಯಾಪಕರುಗಳಿಗೆ ಜವಾಬ್ದಾರಿ ನೀಡಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ದಿನಾಂಕ: 25.03.2024 ರಿಂದ 28.03.2024 ರವರೆಗೆ ಶ್ರೀ ಭುವನೇಂದ್ರ ಕಾಲೇಜು, ಕಾರ್ಕಳ, ಉಡುಪಿ ಜಿಲ್ಲೆ, ಇಲ್ಲಿ ರೋವರ್ಸ್ / ರೇಂಜರ್ಸ್ ಗಳಿಗೆ ರಾಜ್ಯ ಮಟ್ಟದ ಜಲಸಾಹಸ, ಪ್ರಕೃತಿ ಅಧ್ಯಯನ ಮತ್ತು ವಿಪತ್ತು ನಿರ್ವಹಣಾ ಶಿಬಿರವನ್ನು ಏರ್ಪಡಿಸಲಾಗಿದೆ. ಸದರಿ ರಾಜ್ಯಮಟ್ಟದ ಶಿಬಿರಕ್ಕೆ ರಾಜ್ಯದ ಎಲ್ಲಾ ಪದವಿ ಕಾಲೇಜುಗಳ ರೋವರ್ಸ್-ರೇಂಜರ್ಸ್‌ಗಳು ಹಾಜರಾಗಲು ಸೂಚಿಸಲಾಗಿದೆ ಹಾಗೂ ಸದರಿ ಅವಧಿಗೆ ಅನ್ಯಕಾರ್ಯನಿಮಿತ್ತ ಮಂಜೂರು ಮಾಡಲಾಗಿದೆ.

ಅಡಕ: ಉಲ್ಲೇಖಿತ ಪತ್ರದ ಪ್ರತಿ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಸದರಿ ತರಬೇತಿಯಲ್ಲಿ ಭಾಗವಹಿಸುವ ಅಧ್ಯಾಪಕರುಗಳನ್ನು ಕಡ್ಡಾಯವಾಗಿ ತರಬೇತಿಯ ಹಿಂದಿನ ದಿನವೇ ಬಿಡುಗಡೆಗೊಳಿಸುವಂತೆ ಸೂಚಿಸಲಾಗಿದೆ.
2. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.

ಪ್ರತಿಯನ್ನು:

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರಗಿ.
2. ರಾಜ್ಯ ಕಾರ್ಯದರ್ಶಿಗಳು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಜ್ಯ ಕೇಂದ್ರ ಕಾರ್ಯಾಲಯ, # 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001.
3. ಆಯುಕ್ತರು, ನಿರ್ದೇಶಕರು, ಹೆಚ್ಚುವರಿ ನಿರ್ದೇಶಕರು, ಮುಖ್ಯಾಡಳಿತಾಧಿಕಾರಿಗಳು, ಜಂಟಿ ನಿರ್ದೇಶಕರ ಆಪ್ತಶಾಖೆಗೆ, ಕೇಂದ್ರ ಕಛೇರಿ, ಬೆಂಗಳೂರು.
4. ಶ್ರೀ ಆರ್.ಶ್ರೀಕಾಂತ್, ಸಮನ್ವಯಾಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
5. ಕಛೇರಿ ಪ್ರತಿ.

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org


ಸಂಖ್ಯೆ:SHQ/Letter/[illegible]/2023-24 ದಿನಾಂಕ:01.03.2024

ಮಾನ್ಯ ಆಯುಕ್ತರು
ಕಾಲೇಜು ಶಿಕ್ಷಣ ಇಲಾಖೆ
ಬೆಂಗಳೂರು

ಮಾನ್ಯರೆ,

ವಿಷಯ:- ರೋವರ್ಸ್ /ರೇಂಜರ್ಸ್‌ಗಳಿಗೆ ರಾಜ್ಯ ಮಟ್ಟದ ಜಲಸಾಹಸ, ಪ್ರಕೃತಿ ಅಧ್ಯಯನ ಮತ್ತು ವಿಪತ್ತು ನಿರ್ವಹಣಾ ಶಿಬಿರಗಳನ್ನು ಆಯೋಜಿಸಿರುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆ ಮತ್ತು ಉಡುಪಿ ಜಿಲ್ಲಾ ಹಾಗೂ ಶ್ರೀ ಭುವನೇಂದ್ರ ಕಾಲೇಜಿನ ಸಹಯೋಗದೊಂದಿಗೆ ದಿನಾಂಕ 25 ರಿಂದ 28 ಮಾರ್ಚ್ 2024 ರವರೆಗೆ ಶ್ರೀ. ಭುವನೇಂದ್ರ ಕಾಲೇಜು, ಕಾರ್ಕಳ, ಉಡುಪಿ ಜಿಲ್ಲೆಯಲ್ಲಿ ರೋವರ್-ರೇಂಜರ್‌ಗಳಿಗೆ ರಾಜ್ಯ ಮಟ್ಟದ ಜಲಸಾಹಸ, ಪ್ರಕೃತಿ ಅಧ್ಯಯನ ಮತ್ತು ವಿಪತ್ತು ನಿರ್ವಹಣಾ ಶಿಬಿರಗಳನ್ನು ಏರ್ಪಡಿಸಲಾಗಿದೆ. ಶಿಬಿರದ ವಿವರಗಳು ಈ ಕೆಳಕಂಡಂತಿವೆ.

| | |
|---|---|
| ಶಿಬಿರ | ರೋವರ್ಸ್ /ರೇಂಜರ್ಸ್‌ಗಳಿಗೆ ರಾಜ್ಯ ಮಟ್ಟದ ಜಲಸಾಹಸ, ಪ್ರಕೃತಿ ಅಧ್ಯಯನ ಮತ್ತು ವಿಪತ್ತು ನಿರ್ವಹಣಾ ಶಿಬಿರ |
| ದಿನಾಂಕ | ದಿನಾಂಕ 25 ರಿಂದ 28 ಮಾರ್ಚ್ 2024 ರವರೆಗೆ |
| ಸ್ಥಳ | ಶ್ರೀ ಭುವನೇಂದ್ರ ಕಾಲೇಜು, ಕಾರ್ಕಳ, ಉಡುಪಿ ಜಿಲ್ಲೆ |
| ಹಾಜರಾಗುವ ವೇಳೆ ಮತ್ತು ದಿನಾಂಕ | ದಿನಾಂಕ: 25.03.2024 ರಂದು ಬೆಳಗ್ಗೆ 9.00 ಗಂಟೆಗೆ ಕಡ್ಡಾಯವಾಗಿ ವರದಿ ಸಲ್ಲಿಸುವುದು. (ಶಿಬಿರಕ್ಕೆ ತಡವಾಗಿ ಬರುವಂತಿಲ್ಲ.) |
| ಬಿಡುಗಡೆ ಮಾಡುವ ದಿನಾಂಕ | ದಿನಾಂಕ 28.03.2024ರಂದು ಸಂಜೆ 4.00 ಗಂಟೆಗೆ ಬಿಡುಗಡೆಗೊಳಿಸಲಾಗುವುದು. |
| ತರಬೇಕಾದ ಸಾಮಾಗ್ರಿಗಳು | ಶಿಬಿರಕ್ಕೆ ಅವಶ್ಯಕವಿರುವ ಉಡುಪು ಮತ್ತು ಸಲಕರಣೆಗಳು. ಸಮವಸ್ತ್ರ, ಬದಲಿ ಉಡುಪು, ತಟ್ಟೆ, ಲೋಟ ಹಗುರ ಹಾಗೂ ಬೆಚ್ಚನೆ ಹಾಸಿಗೆ, ನೂಲಿನ ಹಗ್ಗ, ಬರವಣಿಗೆ ಸಾಮಾಗ್ರಿಗಳು, ವೈಯಕ್ತಿಕ ವಸ್ತುಗಳು, ನೋಟ್ ಪುಸ್ತಕ, ಶಿಬಿರಾಗ್ನಿ ಉಡುಪು, ದೈಹಿಕ ವೈದ್ಯಕೀಯ ಪ್ರಮಾಣ ಪತ್ರ |
| ನಿಮ್ಮಜಿಲ್ಲೆಗೆ ನಿಗದಿಪಡಿಸಿರುವ ಕೋಟಾ | ಪ್ರತಿ ಜಿಲ್ಲೆಯಿಂದ ನಿಪುಣ್ ತರಬೇತಿ ಹೊಂದಿದ 2 ರೋವರ್ಸ್ ಮತ್ತು 2 ರೇಂಜರ್ಸ್‌ಗಳನ್ನು ನಿಯೋಜಿಸಲು ತಿಳಿಸಿದೆ |
| ಪ್ರಯಾಣ ವೆಚ್ಚ | ಆಯಾ ಕಾಲೇಜಿನ ರೋವರ್ಸ್-ರೇಂಜರ್ಸ್ ನಿಧಿಯಿಂದ ಭರಿಸುವುದು |
| ನೊಂದಣಿ ಶುಲ್ಕ | ತಲಾ ರೂ.50/-ಗಳನ್ನು ಕಾಲೇಜಿನ ರೋವರ್ಸ್-ರೇಂಜರ್ಸ್ ನಿಧಿಯಿಂದ ಭರಿಸುವುದು |
| ಯು.ಐ.ಡಿ ನಂಬರ್ | ಭಾಗವಹಿಸುವ ರೋವರ್ಸ್ ಮತ್ತು ರೇಂಜರ್ಸ್‌ಗಳು ಯು.ಐ.ಡಿ ಕಡ್ಡಾಯವಾಗಿ ಹೊಂದಿರಬೇಕು |

| | |
|---|---|
| ಊಟ ಮತ್ತು ವಸತಿ ವ್ಯವಸ್ಥೆ | ಉಡುಪಿ ಜಿಲ್ಲಾ ಸಂಸ್ಥೆ ಮತ್ತು ಶ್ರೀ ಭುವನೇಂದ್ರ ಕಾಲೇಜು, ಕಾರ್ಕಳ ಇವರ ಸಹಕಾರದಲ್ಲಿ ವ್ಯವಸ್ಥೆ ಮಾಡಿರುತ್ತಾರೆ |
| ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ | ಶ್ರೀ.ಸುಮನ್ ಶೇಖರ್, ಎ.ಎಸ್.ಒ.ಸಿ(ಗೈ), ಉಡುಪಿ - 9844994576 |

ಆದ್ದರಿಂದ ತಾವು, ತಮ್ಮ ವ್ಯಾಪ್ತಿಯ ಪದವಿ ಕಾಲೇಜುಗಳ ರೋವರ್ಸ್-ರೇಂಜರ್ಸ್‌ಗಳನ್ನು ಮೇಲ್ಕಂಡ ಶಿಬಿರಗಳಿಗೆ ನಿಯೋಜಿಸುವಂತೆ ಮತ್ತು ಭಾಗವಹಿಸುವ ರೋವರ್ಸ್-ರೇಂಜರ್ಸ್‌ಗಳ ಶಿಬಿರ ಶುಲ್ಕ ಮತ್ತು ಪ್ರಯಾಣ ಭತ್ಯೆಯನ್ನು" ಆಯಾಯ ಕಾಲೇಜು "ರೋವರ್-ರೇಂಜರ್ ನಿಧಿ"ಯಿಂದ ಭರಿಸಿಕೊಳ್ಳುವಂತೆ ಪ್ರಾಂಶುಪಾಲರಿಗೆ ಸೂಕ್ತ ಆದೇಶ ಮತ್ತು ಅನುಮತಿ ನೀಡಿ, ಪ್ರೋತ್ಸಾಹಿಸಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇನೆ.

ಸ್ಕೌಟ್ಸ್ – ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

ಪ್ರತಿಯನ್ನು ಗೌರವದೊಂದಿಗೆ ಈ ಕೆಳಕಂಡವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಗಳಿಗಾಗಿ ಸಲ್ಲಿಸಿದೆ:

1. ಶ್ರೀ. ಶ್ರೀಕಾಂತ, ನೋಡಲ್ ಅಧಿಕಾರಿ, ಪದವಿ ಕಾಲೇಜು & ಎ.ಎಸ್.ಸಿ, ಬಿಎಸ್&ಜಿ, ಕರ್ನಾಟಕ